**ಅಸಲು ದಾವಾ ಸಂಖ್ಯೆ: 993/2021**

**ಡಿ.ಡಬ್ಲ್ಯೂ-1**

**<u>ದಿಃ 17-06-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್.ಎ.ಎಸ್. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.1,000/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**<u>ಪಾಟೀ ಸವಾಲು: ವಾದಿ ಪರ ಶ್ರೀ LSK ವಕೀಲರಿಂದಃ</u>**

ಈ ದಾವೆಯನ್ನು ಸಾಗರ ಕೋಲಕಾರ ರವರು ನನ್ನ ವಿರುದ್ಧ ದಾವಾ ಸ್ವತ್ತಿನ ಮಾಲೀಕರೆಂದು ಹಾಕಿರುತ್ತಾರೆ. 1ನೇ ವಾದಿಯ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿಯವರ ಅಜ್ಜನ ಹೆಸರು ಮಲ್ಲಪ್ಪ ಕೋಲಕಾರ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಶ್ರೀ ಮಲ್ಲಪ್ಪ ಕೋಲಕಾರ ರವರಿಂದ ನನ್ನ ಅಜ್ಜ ಖರೀದಿಸಿರುತ್ತಾರೆ. ನನ್ನ ಅಜ್ಜನಿಂದ ನನ್ನ ತಂದೆಗೆ ಸದರಿ ಆಸ್ತಿ ಬಂದಿದ್ದು, ನನ್ನ ತಂದೆ ತೀರಿಕೊಂಡ ನಂತರ ನನಗೆ ಬಂದಿರುತ್ತದೆ. ಆ ರೀತಿಯಾಗಿ ನನ್ನ ಅಜ್ಜ ಶ್ರೀ ಮಲ್ಲಪ್ಪ ಕೋಲಕಾರ ರವರಿಂದ 1969 ಇಸ್ವಿಯಲ್ಲಿ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಸದರಿ ಆಸ್ತಿಯ ಮ್ಯುಟೇಷನ್ ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಹುಟ್ಟುವ ಮೊದಲು ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು 1976 ರಲ್ಲಿ ಹುಟ್ಟಿರುತ್ತೇನೆ. ನಾನು ದಾವಾ ಆಸ್ತಿಯ ಮ್ಯುಟೇಷನ್ ಡೈರಿಯನ್ನು ನೋಡಿರುತ್ತೇನೆ. ನಿಪಿಃ6 ರಂತೆ ಮ್ಯುಟೇಷನ್ ಡೈರಿ ನಂ.2198 ರ ಪ್ರಕಾರ ದಾವಾ ಸ್ವತ್ತು ಬಸವಂತ ಶಿವಪ್ಪ ಚೌಗಲಾ ರವರು ಶಿವರಾಯಿ ಮಲ್ಲಪ್ಪ ಚೌಗಲಾ ರವರಿಂದ ಖರೀದಿಸಿರುತ್ತಾರೆ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಡೈರಿಯ ತಾರೀಖು 31.09.1969 ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ದಾಖಲಾತಿಯ ಪ್ರಕಾರ ನನ್ನ ಪೂರ್ವಜರಿಗೆ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಸರಿ.

ಅಸಲು ದಾವಾ ಸಂಖ್ಯೆ 993/2021

**ಡಿ.ಡಬ್ಲ್ಯೂ-1**

ಸದರಿ ದಾಖಲೆಯ ಪ್ರಕಾರ ನನ್ನ ಅಜ್ಜ ಶ್ರೀ ಮಲ್ಲಪ್ಪ ಕೋಲಕಾರ ರವರಿಂದ ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಸಂಬಂಧಿಸಿದ ಕಾಗದ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿಃ1 ಖರೀದಿ ಪತ್ರದಲ್ಲಿರುವ ಹೇಳಿರುವ ದಿನಾಂಕ ಹಾಗೂ ಖರೀದಿಗೆ ಕೊಟ್ಟವರ ಹೆಸರು ಮತ್ತು ನಿಪಿಃ6 ರಲ್ಲಿ ಹೇಳಿರುವ ಸದರಿ ವಿಷಯಕ್ಕೂ ಹೊಂದಾಣಿಕೆ ಇರುವುದಿಲ್ಲ ಎಂದರೆ ಸಾಕ್ಷಿಯು ಸಂಬಂಧಪಟ್ಟ ಇಲಾಖೆಯವರು ತಪ್ಪು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ನನಗೆ ಯಾರು ತಪ್ಪು ಮಾಡಿರುತ್ತಾರೆ ಎಂದು ಈಗ ಹೇಳಲಾಗುವುದಿಲ್ಲ. ನಿಪಿಃ6 ರಲ್ಲಿ ಡೈರಿ ನಂ.2099, ದಿಃ23.07.1968 ರ ಪ್ರಕಾರ ದಾವಾ ಆಸ್ತಿಯು ಸಿದರಾಯಿ ಮಲ್ಲಪ್ಪ ಕೋಲಕಾರ ರವರ ಹೆಸರಿಗೆ ಬಂದಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಪಿಃ7 ರಲ್ಲಿ ಡೈರಿ ನಂ.2461, ದಿಃ23.02.1979 ರ ಪ್ರಕಾರ ದಾವಾ ಆಸ್ತಿಯು ಸಿದರಾಯಿ ಮಲ್ಲಪ್ಪ ಕೋಲಕಾರ ರವರ ಹೆಸರಿಗೆ ಸರ್ಕಾರದಿಂದ re-grant ಆಗಿರುತ್ತದೆ ಎಂದರೆ ಸರಿಯಲ್ಲ.

2. ಈವರೆಗೂ ವಾದಿಯರು ದಾವಾ ಸ್ವತ್ತಿನ ಮಾಲೀಕರಾಗಿದ್ದು, ಅದರ ಸ್ವಾಧೀನದಲ್ಲಿದ್ದು, ನಾನು ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿ, ಸದರಿ ದಾವಾ ಸ್ವತ್ತು ನನಗೆ ಸೇರಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ23.02.1979 ರಲ್ಲಿ ಸಿದರಾಯಿ ಮಲ್ಲಪ್ಪ ಕೋಲಕಾರ ರವರ ಹೆಸರಿನಲ್ಲಿಯೇ ದಾವಾ ಸ್ವತ್ತು ಇದ್ದ ಕಾರಣ, ಸರ್ಕಾರವು ಅವರ ಹೆಸರಿಗೆ ಸದರಿ ಸ್ವತ್ತನ್ನು re-grant ಮಾಡಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ನಾನು ಸಿದರಾಯಿ ಮಲ್ಲಪ್ಪ ಕೋಲಕಾರ ರವರ ಹೆಸರಿಗೆ re-grant ಆದ ದಾವಾ ಸ್ವತ್ತನ್ನು ರದ್ದುಗೊಳಿಸಲು ನಿಡಿಃ3 ರಂತೆ ದಿಃ17.02.2022 ರಂದು ರೈತಾವ ಆದೇಶ ಪಡೆದಿರುತ್ತೇವೆ ಎಂದರೆ ಸರಿ. ಸದರಿ ಆದೇಶವನ್ನು ಪಡೆಯುವ ವಿಚಾರಣಾ ಕಾಲದಲ್ಲಿ ನಾನು ವಾದಿಯರಿಗೆ ಯಾವುದೇ ನೋಟೀಸು ಹಾಗೂ

ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಸದರಿ ಆದೇಶವನ್ನು ನಾನು ಸಿದರಾಯಿ ಮಲ್ಲಪ್ಪ ಕೋಲಕಾರ ರವರ ವಾರಸುದಾರರಿಗೆ ಯಾವುದೇ ಮಾಹಿತಿಯನ್ನು ನೀಡದೇ ಪಡೆದಿರುವುದು ಕಾನೂನು ಬಾಹಿರವಾಗಿರುತ್ತದೆ ಹಾಗೂ ನಾನು ವಾಸ್ತವಾಂಶವನ್ನು ಮುಚ್ಚಿಡುವ ಉದ್ದೇಶದಿಂದ ಆ ರೀತಿಯಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರ ಪೂರ್ವಜರಿಗೆ ದಾವಾ ಸ್ವತ್ತು ಸರ್ಕಾರದಿಂದ ಕೋಲಕಾರ್ಕಿ ಜಮೀನು ಎಂದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಕೋಲಕಾರ್ಕಿ ಜಮೀನು ಆಗಿದ್ದು, ನನ್ನ ಪೂರ್ವಜರು ಅದನ್ನು ಖರೀದಿಸುವಾಗ ಸರ್ಕಾರದಿಂದ ಅನುಮತಿಯನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಖರೀದಿಸಿದ ಕಾರಣ ಅನುಮತಿಯನ್ನು ಪಡೆದಿರಬಹುದು ಎಂದು ನುಡಿಯುತ್ತಾರೆ. ಸದರಿ ಅನುಮತಿಯನ್ನು ಪಡೆದಿರುವ ಬಗ್ಗೆ ನಾನು ಯಾವುದಾದರೂ ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಯೇ ಎಂದರೆ ಸಾಕ್ಷಿಯು ನಾನು ಎಲ್ಲ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿಃ9 ಪುಂಡಲೀಕ ಸಿದರಾಯಿ ಕೋಲಕಾರ ರವರ ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ್ದು, ಅದರಲ್ಲಿ ಸದರಿಯವರ ತಂದೆಯ ಸಹಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿಃ9ರಲ್ಲಿ ಇರುವ ಸಿದರಾಯಿ ಮಲ್ಲಪ್ಪ ಕೋಲಕಾರ ರವರ ಸಹಿಗೂ ನಿಡಿಃ1 ರಲ್ಲಿರುವ ಸದರಿಯವರ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಆದಕಾರಣ ನಾನು ಹೇಳಿರುವ ಪ್ರಕಾರ ನನ್ನ ಅಜ್ಜ ಸಿದರಾಯಿ ಮಲ್ಲಪ್ಪ ಕೋಲಕಾರ ರವರಿಂದ ದಾವಾ ಸ್ವತ್ತನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿಯಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವಾದಿಯರಿಗೆ ತೊಂದರೆ ನೀಡಿದ್ದರಿಂದ, ಸದರಿಯವರು ಈ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ವಾದಿಯರ ಪರಿಚಯ ಈ ದಾವೆಯನ್ನು ಸಲ್ಲಿಸಿದ ನಂತರ ಆಗಿರುತ್ತದೆ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ: 993/2021

**ಡಿ.ಡಬ್ಲ್ಯೂ-1**

**ಮರು ವಿಚಾರಣೆ: ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**